**ಇಂದು ದಿನಾಂಕ:** 13.01.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಜಿ.ವಕೀಲರಿಂದಃ**

ನನ್ನ ತಂದೆ ಬರೆದುಕೊಟ್ಟಿರುವ ವ್ಯವಸ್ಥಾ ಪತ್ರಕ್ಕೆ ಉಳಿದ ವಾರಸುದಾರರು ಸಹಿ ಹಾಕಿಲ್ಲ. 2 ನೇ ಪ್ರತಿವಾದಿ ಸುಮಾರು 35 ವರ್ಷಗಳ ಹಿಂದೆಯೇ ಮೈಸೂರಿಗೆ ಹೋಗಿ ನೆಲೆಸಿದ್ದಾರೆ ಎಂದರೆ ಸರಿ ನಾನು ಕೂಡ ಮೈಸೂರಿನಲ್ಲಿಯೇ ನೆಲೆಸಿದ್ದೇನೆ. ನನ್ನ ತಂದೆಯೂ ಸಹ ಮೈಸೂರಿನಲ್ಲಿಯೇ ವಾಸವಿದ್ದರು ಎಂದರೆ ಸರಿ. ವಾದಿ ಯಾವ ಯಾವ ಆಸ್ತಿಗಳನ್ನು ಬಿಟ್ಟಿದ್ದಾರೆ ಎಂಬುದರ ನನ್ನ ಲಿಖಿತ ಹೇಳಿಕೆಯಲ್ಲಿ ವಿವರಣೆ ನೀಡಿದ್ದೇನೆ. ನಾನು ಕಟ್ಟಿರುವ ಮನೆಯನ್ನು ಸ್ವಯಾರ್ಜಿತವಾಗಿ ಸಂಪಾದಿಸಿ ಕಟ್ಟಿರುವುದಾಗಿ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ.

2 ನೇ ಪ್ರತಿವಾದಿ ಶೇಟು ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು ಎಂದರೆ ಸರಿಯಲ್ಲ ನಮ್ಮದೇ ಸ್ವಂತ ಕಮಲ್ ಫುಡ್ ಪ್ರೋಡಕ್ಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಫ್ಯಾಕ್ಟರಿಯನ್ನು ಸುಮಾರು 40 ವರ್ಷದಿಂದ 2 ನೇ ಪ್ರತಿವಾದಿ ನಡೆಸುತ್ತಿದ್ದಾರೆ. ಫ್ಯಾಕ್ಟರಿ ಇರುವ ಆಸ್ತಿ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ಫ್ಯಾಕ್ಟರಿಯನ್ನು 1989 ರಲ್ಲಿ ಸ್ಥಾಪನೆ ಮಾಡಿದ್ದೇವೆ. ಫ್ಯಾಕ್ಟರಿ ಇರುವ ಜಾಗವನ್ನು ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿಯಿಂದ 2 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ಸರಿ. ಕೈಗಾರಿಕಾಭಿವೃದ್ಧಿ ಮಂಡಳಿಗೆ ನನ್ನ ತಂದೆ ರೂ.9,00,000/- ಒಟ್ಟು ಕುಟುಂಬದಿಂದ ಕೊಟ್ಟಿದ್ದಾರೆ. ಸದರಿ ಹಣವನ್ನು ಉಪ್ಪಿನಕಾಯಿ ಫ್ಯಾಕ್ಟರಿಯಿಂದ ನನ್ನ ತಂದೆ ಮತ್ತು ನಾವೆಲ್ಲರೂ ಸಂಪಾದನೆ ಮಾಡಿದ್ದೇವು ಮತ್ತು ಕರ್ನಾಟಕ ಕೈಗಾರಿಕೆ ಹಣಕಾಸು ಅಭಿವೃದ್ಧಿ ಮಂಡಳಿಯಿಂದ ಸಾಲ ಪಡೆದಿದ್ದೇವು.

ಉಪ್ಪಿನಕಾಯಿ ಮಾರಾಟ ಮಾಡಿ ಬಂದ ಹಣದಿಂದ ಕೈಗಾರಿಕಾಭಿವೃದ್ಧಿ ಮಂಡಳಿಗೆ ನನ್ನ ತಂದೆ ಹಣ ಪಾವತಿಸಿರುವುದಾಗಿ ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ. 1989 ರಲ್ಲಿ ನಾವು 9,00,000/- ಇಟ್ಟಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ತಂದೆ ಮೈಸೂರಿನಿಂದ ಭೂತನಹಳ್ಳಿಗೆ ಓಡಾಡಿಕೊಂಡು ಇದ್ದರು ಎಂದರೆ ಸರಿಯಲ್ಲ ನನ್ನ ತಂದೆ ಫ್ಯಾಕ್ಟರಿ ನೋಡಿಕೊಂಡು ವ್ಯವಸಾಯ ಮಾಡಿಕೊಂಡು ಓಡಾಡುತ್ತಿದ್ದರು. ನನ್ನ ತಂದೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡು ಇದ್ದರು. 2 ನೇ ಪ್ರತಿವಾದಿ ಸ್ಥಾಪಿಸಿದ ಫ್ಯಾಕ್ಟರಿಯಲ್ಲಿ ನನ್ನ ತಂದೆ ಕೆಲಸ ಮಾಡಿಕೊಂಡು ಇದ್ದರು ಎಂದು ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೀರಾ ಎಂದರೆ ನನ್ನ ತಂದೆಯೇ ಕೆಲಸ ಮಾಡಿಕೊಂಡು ಇದ್ದರು.

ನಮ್ಮ ಕುಟುಂಬದವರೆಲ್ಲರೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತ ಹಣ ಸಂಪಾದನೆ ಮಾಡುತ್ತಿದ್ದ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತು. ನಾನೇ ಹೇಳಿ ನಮ್ಮ ವಕೀಲರು ತಯಾರಿಸಿರುವುದಕ್ಕೆ ಸಹಿ ಮಾಡಿದ್ದೇನೆ. ಫ್ಯಾಕ್ಟರಿ ಸ್ಥಾಪಿಸಿದ ಬಗ್ಗೆ ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿ ಹೇಳಿದ್ದೇನೆ. ಆ ಬಗ್ಗೆ ನನ್ನ ಲಿಖಿತ ಹೇಳಿಕೆ ಮತ್ತು ಪ್ರಮಾಣ ಪತ್ರದಲ್ಲಿ ಪ್ರಸ್ತಾವನೆ ಮಾಡಿಲ್ಲ ಎಂದರೆ ಸುಳ್ಳು. 2 ನೇ ಪ್ರತಿವಾದಿಯ ಹೆಸರಿನಲ್ಲಿ ಫ್ಯಾಕ್ಟರಿ ಲೈಸೆನ್ಸ ಇತ್ತು. ಅದರಲ್ಲಿ ನನ್ನದು partnership ಇತ್ತು. Partnership deed ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಬ್ಯಾಂಕಿನಿಂದ ಪಡೆದಿದ್ದ ಸಾಲವನ್ನು 2 ನೇ ಪ್ರತಿವಾದಿ ತೀರಿಸಿದ್ದಾರೆ ಎಂದರೆ ಸರಿ. ಸಾಲವನ್ನು ನಾನು ತೀರಿಸಿರುವ ಬಗ್ಗೆ ರಶೀದಿ ಇರುವುದಿಲ್ಲ. ನನ್ನನ್ನು partnership ಆಗಿ ಮಾಡಿಕೊಡಬೇಕೆಂದು 2 ನೇ ಪ್ರತಿವಾದಿಗೆ ಕೇಳಿಲ್ಲ. Kamal Fruits processing industry 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ನನ್ನ ತಾಯಿ ಮತ್ತು 5 ನೇ

ಪ್ರತಿವಾದಿ ಸೇರಿ ಮೈಸೂರಿನಲ್ಲಿದ್ದ ಮನೆಯನ್ನು ನಿ.ಡಿ–18 ರ ಪ್ರಕಾರ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಮ್ಮ ಆಸ್ತಿಗಳನ್ನು ಮಾರಾಟ ಮಾಡಿದ್ದೀರಿ ಎಂದು ಅವರಿಗೆ ನೋಟೀಸು ಕೊಟ್ಟಿಲ್ಲ. ನನ್ನ ಸ್ವಂತ ಸಂಪಾದನೆಯಿಂದ ಗಳಿಸಿದ ಆಸ್ತಿಯನ್ನು ನಿನಗೆ ಕೊಡುತ್ತಿದ್ದೇನೆ ಎಂದು ನನ್ನ ತಂದೆ ವ್ಯವಸ್ಥಾ ಪತ್ರದಲ್ಲಿ ಬರೆದಿದ್ದಾರೆ.

ವ್ಯವಸ್ಥಾ ಪತ್ರ ಆಗುವ ಮೊದಲು ನಮ್ಮಗಳ ಮಧ್ಯೆ ವಿಭಾಗ ಪತ್ರ ಆಗಿಲ್ಲ. ತನ್ನ ಎಲ್ಲಾ ಮಕ್ಕಳಿಗೂ ಆಸ್ತಿ ವಿಭಾಗ ಮಾಡಿಕೊಟ್ಟು ಅದರ ಪ್ರಕಾರ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ವ್ಯವಸ್ಥಾ ಪತ್ರದಲ್ಲಿ ಬರೆಸಿಲ್ಲ. ವ್ಯವಸ್ಥಾ ಪತ್ರವನ್ನು ಯಾವ ಉದ್ದೇಶಕ್ಕಾಗಿ ಬರೆದುಕೊಟ್ಟಿದ್ದಾರೆ ಎಂದರೆ ಅವರ ಸ್ವಂತ ಆಸ್ತಿ ಬರೆದಿದ್ದಾರೆ. ಪಿತ್ರಾರ್ಜಿತ ಆಸ್ತಿಗಳನ್ನು ಎಷ್ಟು ಮಾರಾಟ ಮಾಡಿದ್ದಾರೆ ಎಂದರೆ ಅವರಿಗೆ ಯಾವುದೇ ಪಿತ್ರಾಜಿತ ಆಸ್ತಿ ಬಂದಿಲ್ಲ. ನಮ್ಮ ತಂದೆ ಯಾವುದೇ ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡಿಲ್ಲ. ನನ್ನ ತಂದೆ ಆದಾಯ ತೆರಿಗೆ ಕಟ್ಟುತ್ತಿರಲಿಲ್ಲ. ಯಾವುದೇ ವ್ಯವಹಾರ ಮಾಡಬೇಕಾದರೂ ಲೈಸೆನ್ಸ ಪಡೆದುಕೊಂಡು ಮಾಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಈಗ ನಾನು ಮೈಸೂರಿನಲ್ಲಿ ಗಾರೆ ಕೆಲಸ ಮಾಡುತ್ತಿದ್ದೇನೆ. ನಾನು ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನಮ್ಮ ತಂದೆಗೆ ಮಧ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸುಳ್ಳು.

ವ್ಯವಸ್ಥಾ ಪತ್ರಕ್ಕೆ ಸಾಕ್ಷಿಗಳನ್ನು ಹೊರತುಪಡಿಸಿ ನಾನು ನನ್ನ ತಂದೆ ಸಹಿ ಮಾಡಿದ್ದೇವೆ. ವ್ಯವಸ್ಥಾ ಪತ್ರ ಬರೆದ ದಿನವೇ ನೊಂದಣಿಯಾಯಿತು. ಎಷ್ಟು ಗಂಟೆಗೆ ನೊಂದಣಿಯಾಯಿತು ಎಂದು ನೆನಪಿಲ್ಲ. ನನ್ನ ಸಮಕ್ಷಮ ಸಾಕ್ಷಿಗಳು ಸಹಿ ಹಾಕಿಲ್ಲ. ಪತ್ರ ಸಿದ್ಧಪಡಿಸುವ ಸಂದರ್ಭದಲ್ಲಿ ನಾನು ಇರಲಿಲ್ಲ. ವ್ಯವಸ್ಥಾ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದಗೆ ವ್ಯವಸ್ಥಾ ಪತ್ರ ಬರೆದುಕೊಡಲು ಇಚ್ಚೆ ಇರಲಿಲ್ಲ ನನ್ನ ತಂದೆ ಕುಡಿದ ನಶೆಯಲ್ಲಿದ್ದಾಗ ವ್ಯವಸ್ಥಾ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**